**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ**

**ಸಿಸಿ ನಂ ಃ 942/2024**

**ಸಿಡಬ್ಲು ಃ 1**

**ಪಿಡಬ್ಲು ಃ 1**

**ಹೆಸರು** ಃ ಕಮಲವ್ವಾ ಈರಪ್ಪ ಗಂಡ್ರೊಳ್ಳಿ

**ವಯಾ** ಃ 60 ವರ್ಷ

**ಉದ್ಯೋಗ** ಃ ಮನೆಗೆಲಸ ,

**ವಾಸ** ಃ ಯರಗಟ್ಟಿ

**(ದಿನಾಂಕಃ 27-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

ಚಾಸಾ-4 ನನ್ನ ಗಂಡ . ಆರೋಪಿ ನಮ್ಮ ಅಣ್ಣ ತಮ್ಮಂದಿರರು . ದಿನಾಂಕ 12-02-2024 ರಂದು ಸಾಯಂಕಾಲ 6 ಗಂಟೆಗೆ ನಾನು ಮತ್ತು ನನ್ನ ಗಂಡ ನಮ್ಮ ಹೊಲದ ಮನೆಯ ಹತ್ತಿರ ಇದ್ದಾಗ 1ನೇ ಆರೋಪಿ ರಾಜು ಗಂಡ್ರೊಳ್ಳಿ ಹಾಗೂ ಆತನ ತಾಯಿ 2ನೇ ಆರೋಪಿ ಇಬ್ಬರೂ ಬಂದು ನಾವು ಓಡಾಡುವ ಹಾದಿ ಏಕೆ ಬಂದ ಮಾಡಿದಿರಿ ಎಂದು ನಮ್ಮ ಜೊತೆಗೆ ತಂಟೆ ತೆಗೆದರು. ಹಿರಿಯರು ಮಾಡಿದ್ದ ಹಾದಿ ಇದ್ದರೂ ಸಹ ಆರೋಪಿತರು ಹೊಸದಾಗಿ ನಮ್ಮ ಬಾಂದ ಒಡೆದು ಅಲ್ಲಿ ದಾರಿ ಮಾಡಿ ಕೊಡಿ ಎಂದು ಕೇಳಿದರು . ನಾವು ಅದಕ್ಕೆ ಒಪ್ಪಲಿಲ್ಲ. ಶೋಭಾ ನನಗೆ ಕಲ್ಲಿನಿಂದ ನನ್ನ ತಲೆಗೆ ಹೊಡೆದಳು. ರಾಜು ಬಡಿಗೆಯಿಂದ ನನ್ನ ಬೆನ್ನಿಗೆ ಹೊಡೆದನು. 2ನೇ ಆರೋಪಿ ನಿನ್ನ ಕಾಲು ಮತ್ತು ಕೈ ತೆಗೆಯುತ್ತೇನೆ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ. ಇಬ್ಬರೂ ಆರೊಪಿತರು ಸೇರಿ ನನಗೆ ರಂಡೆ ಬೋಸಡಿ ಎಂದು ಅವ್ಯಾಚ್ಯವಾಗಿ ಬೈದಿದ್ದಾರೆ . ಆಗ ನನ್ನ ಗಂಡ ಬಂದು ಬಿಡಿಸಿದರು. ಆಗ ಅವರಿಗೂ ಸಹ ಆರೋಪಿತರು ಬೈದರು. ನನ್ನ ತಲೆಗೆ ಪೆಟ್ಟಾಗಿದ್ದು ನಾನು ಮತ್ತು ನನ್ನ ಗಂಡ ಯಮಕನಮರಡಿ ಸರಕಾರಿ ಆಸ್ಪತ್ರೆಗೆ ಹೋಗಿ ಉಪಚಾರ ಹೊಂದಿ ಅಲ್ಲಿಂದ ಜಿಲ್ಲಾಸ್ಪತ್ರೆಗೆ ಹೋಗಿ ದಾಖಲಾಗಿ ಚಿಕಿತ್ಸೆ ಪಡೆದೆವು.

ನಾನು ಆಸ್ಪತ್ರೆಯಲ್ಲಿದ್ದಾಗ ಪೋಲಿಸರು 13-02-2024 ರಂದು ಬಂದು ನನ್ನ ಕಡೆಯಿಂದ ದೂರು ತೆಗೆದುಕೊಂಡರು. ಆ ದೂರನ್ನು ಪೋಲಿಸರು ನಾನು ಹೇಳಿದಂತೆ ಬರೆದರು. ಸದರಿ

ದೂರನ್ನು ಈಗ ನೋಡುತ್ತಿದ್ದೇನೆ ಅದನ್ನು ನಿ.ಪಿ-1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆ ಮತ್ತು ಕಲ್ಲನ್ನು ನೋಡುತ್ತಿದ್ದು ಸಾಕ್ಷಿ ಇದೇ ಕಟ್ಟಿಗೆ ಮತ್ತು ಕಲ್ಲಿನಿಂದ ಆರೋಪಿತರು ಬದಿಡಿರುವುದಾಗಿ ಹೇಳುತ್ತಾರೆ. ಸದರಿ ಕಟ್ಟಿ ಮತತ ಕಲ್ಲನ್ನು ಮುಮಾ-1 ಮತುತ 2 ಎಂದು ಗುರುತಿಸಾಯಿತು.

ನ್ಯಾಯಾಲಯದ ಮುಂದೆ ಇರುವ ಆರೋಪಿತರು ಮತ್ತು ಆತನ ತಾಯಿ ಹೊಡೆದರು ಎಂದು ಸಾಕ್ಷಿ 1ನೇ ಆರೋಪಿಯನ್ನು ಗುರುತಸಿರುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**

## ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

**ಸಿಸಿ ನಂ ಃ 942/2024**

**ಸಿಡಬ್ಲು ಃ 4**

**ಪಿಡಬ್ಲು ಃ 2**

**ಹೆಸರು** ಃ ಈರಪ್ಪ ದುಂಡಪ್ಪ ಗಂಡ್ರೊಳ್ಳಿ

**ವಯಾ** ಃ **65** ವರ್ಷ

**ಉದ್ಯೋಗ** ಃ ಒಕ್ಕಲುತನ

**ವಾಸ** ಃ ಯರಗಟ್ಟಿ

**(ದಿನಾಂಕಃ 27-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

ಚಾಸಾ-**1** ನನ್ನ ಹೆಂಡತಿ. ಆರೋಪಿತರು ನಮ್ಮ ಅಣ್ಣ ತಮ್ಮಂದಿರರು . ನಾನು ಮತ್ತು ನನ್ನ ಹೆಂಡತಿ ಯರಗಟ್ಟಿಯಲ್ಲಿರುವ ನಮ್ಮ ಹೊಲದಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತೇವೆ. ನಮಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇರುತ್ತಾರೆ.

ದಿನಾಂಕ **12-02-2024** ರಂದು ಸಾಯಂಕಾಲ **6** ಗಂಟೆಗೆ ನಾನು ಮತ್ತು ನನ್ನ ಹೆಂಡತಿ ನಮ್ಮ ಹೊಲದ ಮನೆಯ ಹತ್ತಿರ ಇದ್ದಾಗ **1**ನೇ ಆರೋಪಿ ರಾಜು ಗಂಡ್ರೊಳ್ಳಿ ಹಾಗೂ ಆತನ ತಾಯಿ **2**ನೇ ಆರೋಪಿ ಇಬ್ಬರೂ ಬಂದು "ನಾವು ಓಡಾಡುವ ಹಾದಿ ಏಕೆ ಬಂದ ಮಾಡಿದಿರಿ" ಎಂದು ನಮ್ಮ ಜೊತೆಗೆ ತಂಟೆ ತೆಗೆದರು. ಹಿರಿಯರು ಮಾಡಿದ್ದ ಹಾದಿ ಇದ್ದರೂ ಸಹ ಆರೋಪಿತರು ಹೊಸದಾಗಿ ನಮಗೆ ದಾರಿ ಮಾಡಿ ಕೊಡಿ ಎಂದು ಕೇಳಿದರು . ನಾವು ಅದಕ್ಕೆ ಒಪ್ಪಲಿಲ್ಲ. ಶೋಭಾ ನನ್ನ ಹೆಂಡತಿಗೆ ಕಲ್ಲಿನಿಂದ ಅವಳ ತಲೆಗೆ ಹೊಡೆದಳು. ರಾಜು ಬಡಿಗೆಯಿಂದ ನನ್ನ ಹೆಂಡತಿಯ ಬೆನ್ನಿಗೆ ಹೊಡೆದನು. **2**ನೇ ಆರೋಪಿ ನನ್ನ ಹೆಂಡತಿಯ ಕಾಲು ಮತ್ತು ಕೈ ತೆಗೆಯುತ್ತೇನೆ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ. ಇಬ್ಬರೂ ಆರೊಪಿತರು ಸೇರಿ ನನ್ನ ಹೆಂಡತಿಗೆ ರಂಡೆ ಬೋಸಡಿ ಎಂದು ಅವ್ಯಾಚ್ಯವಾಗಿ ಬೈದಿದ್ದಾರೆ . ಆಗ ನಾನು ಬಂದು ಜಗಳ ಬಿಡಿಸಿದೆ. ಆಗ ನನಗೂ ಸಹ ಆರೋಪಿತರು ಬೈದರು. ನನ್ನ ಹೆಂಡತಿಯ ತಲೆಗೆ ಪೆಟ್ಟಾಗಿದ್ದು ಆಕೆಯನ್ನು ನಾನು ಯಮಕನಮರಡಿ

ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಉಪಚಾರ ಕೊಡಿಸಿದೆ . ಅಲ್ಲಿಂದ ಮುಂದೆ ಜಿಲ್ಲಾಸ್ಪತ್ರೆಗೆ ಹೋಗಿ ಚಿಕಿತ್ಸೆಗೆ ದಾಖಲು ಮಾಡಿದೆ. ದೂರು ಕೊಟ್ಟ ನಂತರ ಪೋಲಿಸರು ನಮ್ಮ ಮನೆಗೆ ಬಂದರು . ಅಲ್ಲಿ ನಾನು ಸ್ಥಳ ತೋರಿಸಿದ ಮೇರೆಗೆ ಅಲ್ಲಿ ಸ್ಥಳ ಪಂಚನಾಮೆ ಮಾಡಿ ಅಲ್ಲಿ ಫೋಟೊ ತೆಗೆದರು. ಈಗ ಸ್ಥಳ ಪಂಚನಾಮೆ ನೋಡುತ್ತಿದ್ದು ಅದನ್ನು ನಿ.ಪಿ-2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಅಲ್ಲಿ ತೆಗೆದ ಫೋಟೊ ನಿ.ಪಿ-3 ಮತ್ತು 4 ಎಂದು ಗುರುತಿಸಲಾಯಿತು.

ಪೋಲಿಸರು ಬಡಿಗೆ ಮತ್ತು ಕಲ್ಲನ್ನು ಅಲ್ಲಿ ಜಪ್ತಿ ಮಾಡಿಕೊಂಡರು . ನ್ಯಾಯಾಲಯದ ಮುಂದೆ ಇರುವ ಮುಮಾ-1 ಮತ್ತು 2 ಕಟ್ಟಿಗೆ ಮತ್ತು ಕಲ್ಲನ್ನು ಸಾಕ್ಷಿ ನೋಡಿ ಇದೇ ಕಟ್ಟಿಗೆ ಮತ್ತು ಕಲ್ಲಿನಿಂದ ಆರೋಪಿತರು ಬದಿಡಿರುವುದಾಗಿ ಹೇಳುತ್ತಾರೆ.

ನ್ಯಾಯಾಲಯದ ಮುಂದೆ ಇರುವ ಆರೋಪಿ ಮತ್ತು ಆತನ ತಾಯಿ ಹೊಡೆದರು ಎಂದು ಸಾಕ್ಷಿ 1ನೇ ಆರೋಪಿಯನ್ನು ಗುರುತಿಸಿರುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**